## ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್-1/ಡಿ.ಇ/1088/2017//ಎಆರ್ಇ-10.

ಡಾ:ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001,
ದಿನಾಂಕ: 29/04/2022.

## ವಿಚಾರಣಾ ವರದಿ

ಉಪಸ್ಥಿತರು: ಜಿ. ನಂಜುಂಡಯ್ಯ, ಅಪರ ನಿಬಂಧಕರು ವಿಚಾರಣೆಗಳು-10,
ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

**ವಿಷಯ:** ಆಪಾದಿತ ಸರ್ಕಾರಿ ನೌಕರ **ಶ್ರೀ ಸುನಿಲ್, *ನಗರ* ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು (ಹಾಲಿ ಸದಸ್ಯ ಕಾರ್ಯದರ್ಶಿ, ಶಹಪೂರ್ ನಗರ ಯೋಜನಾ ಪ್ರಾಧಿಕಾರ, ಯಾದಗಿರ್ ಜಿಲ್ಲೆ** ರವರ ವಿರುದ್ಧದ ಇಲಾಖಾ ವಿಚಾರಣೆಯ ಕುರಿತು.

**ಉಲ್ಲೇಖ:1. ಕಂಪ್ಲೆಂಟ್/ಉಪಲೋಕ್/ಜಿಎಲ್‌ಬಿ/1013/2017/ ಉನಿವಿ-3 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 07/09/2017.**
**2.** ಸರ್ಕಾರದ ಆದೇಶ ಸಂಖ್ಯೆ: ನಅಇ 163 ನಯೋಸೇ 2015 ಬೆಂಗಳೂರು, ದಿನಾಂಕ: 31/10/2017.
**3.** ನಾಮನಿರ್ದೇಶನ ಸಂಖ್ಯೆ:ಉಪಲೋಕ್-1/ಡಿಇ-**1088**/2017, ಬೆಂಗಳೂರು ದಿನಾಂಕ: 04/11/2017.

* * * *

1) ಸದರಿ ವಿಚಾರಣೆಗೆ ಸಂಬಂಧಿಸಿದಂತೆ, **ದೂರುದಾರರಾದ ಶ್ರೀ ಸುಧಾಕರ,** ಮಹೇಂದ್ರಕರ್ ನಿವಾಸ, ಕರ್ನಾಟಕ ಶಾಲೆ ಹತ್ತಿರ, ರಾಜೇಶ್ವರ, ಬಸವಕಲ್ಯಾಣ ತಾಲ್ಲೂಕು, ಬೀದರ್ ಜಿಲ್ಲೆರವರು ಶ್ರೀ ಸುನೀಲ್ ಎಸ್. ಚಕ್ರ, ಸಹಾಯಕ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನೆ ಕಛೇರಿ, ಕಲಬುರುಗಿ (ಇನ್ನು ಮುಂದೆ ಆಪಾದಿತ ಸರ್ಕಾರಿ ನೌಕರ ಎಂದು ಕರೆಯಲ್ಪಡುತ್ತಾರೆ) ರವರನ್ನು ಭೇಟಿ ಮಾಡಿದಾಗ ದುರ್ನಡತೆ ತೋರಿಸಿರುತ್ತಾರೆಂದು ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರು

(ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ರವರು ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ಸಲ್ಲಸಿದ ಮೇರೆಗೆ, ದಾಖಲೆಗಳನ್ನು ಪರಿಶೀಲಿಸಿದಾಗ, ಆಪಾದಿತ ಸರ್ಕಾರಿ ನೌಕರ ದುರ್ನಡತೆ ತೋರಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 7 ರನ್ವಯ ಗೌರವಾನ್ವಿತ ಉಪಲೋಕಾಯುಕ್ತರವರು ತನಿಖೆ ಕೈಗೊಂಡಿರುತ್ತಾರೆ.

2) ಶ್ರೀ **ರಂಗನಾಥ್,** ಸಹಾಯಕ ಕಾರ್ಯಪಾಲಕ ಅಭಿಯಂತರರು, ವಾರ್ಡ್ ನಂ. 141, ಚಾಮರಾಜಪೇಟೆ ಉಪ ವಿಭಾಗ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ರವರ ವಿರುದ್ಧ ದೂರು ಸಲ್ಲಿಸಿ, ಸ್ವತ್ತಿನ ಸಂಖ್ಯೆ 22, 1ನೇ ಮೈನ್, 10ನೇ ರಸ್ತೆ, ಇಲ್ಲಿ ಅನಧಿಕೃತ ಕಟ್ಟಡ ನಿರ್ಮಿಸಲು ಅನುವು ಮಾಡಿರುವುದಾಗಿ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆಯ ಸೆಕ್ಷನ್ 321(1) ಮತ್ತು (2) ರಡಿ ನೋಟಿಸ್ ನೀಡಿದ್ದರೂ ಸಹ ಆಪಾದಿತ ಸರ್ಕಾರಿ ನೌಕರರು ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ ಎಂದು ದೂರು ಸಲ್ಲಿಸಿದ್ದು, ಸದರಿ ದೂರಿನ ಮೇರೆಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ 9 ರಡಿಯಲ್ಲಿ ವಿಚಾರಣೆಗೆ ತೆಗೆದುಕೊಂಡು ತನಿಖೆ ಕೈಗೊಂಡಿರುತ್ತಾರೆ.

3) ದೂರುದಾರರ ತಾಯಿಯವರಾದ ಶ್ರೀಮತಿ ಮಾಣಿಕಬಾಯಿರವರ ಹೆಸರಿನಲ್ಲಿ ಸೇಡಂ ತಾಲ್ಲೂಕಿನ ಮುಧೋಳ ಗ್ರಾಮದ ಸರ್ವೆ ನಂ. 348/5,6,7 ರಲ್ಲಿ ಒಟ್ಟು 23 ಗುಂಟೆ ಜಮೀನನ್ನು ಕೃಷಿಯೇತವನ್ನಾಗಿ ಪರಿವರ್ತಿಸಲು ಅರ್ಜಿ ಸಲ್ಲಿಸಲಾಗಿದ್ದು, ಅದಕ್ಕನುಗುಣವಾಗಿ ಮಾನ್ಯ ಜಿಲ್ಲಾಧಿಕಾರಿಗಳು, ಕಲಬುರಗಿ ರವರು ಪತ್ರ ಸಂ : ಕಂ/ಭೂಕೃಯೇ/ಗ್ರಾಮೀಣ 123/2014-15 ದಿನಾಂಕ 23.02.2015 ರನ್ವಯ ಆರು ಕಾರ್ಯಾಲಯಗಳಿಗೆ ಎನ್‌ಓಸಿ 15 ದಿನಗಳ ಒಳಗಡೆ ನೀಡಲು ನಿರ್ದೇಶಿಸಿದ್ದರು. ಸುಮಾರು 2 ತಿಂಗಳು ಕಳೆದರೂ ನಗರ ಮತ್ತು ಗ್ರಾಮಾಂತರ ಯೋಜನೆ, ಕಲಬುರಗಿರವರು ಎನ್‌ಓಸಿ ಸಲ್ಲಿಸಿರುವುದಿಲ್ಲ. ಆದ್ದರಿಂದ, ದುರುದಾರರು 7-8 ಬಾರಿ ಸದರಿ ಕಾರ್ಯಾಲಯಕ್ಕೆ ಭೇಟಿ ನೀಡಿ ವಿನಂತಿಸಿಕೊಂಡರೂ ಪ್ರಯೋಜನವಾಗಿಲ್ಲ.

4) ದಿನಾಂಕ 17..04.2015 ರಂದು ದೂರುದಾರರು ನಗರ ಮತ್ತು ಗ್ರಾಮಾಂತರ ಯೋಜನೆ ಕಲಬುರಗಿ ಕಾರ್ಯಾಲಯಕ್ಕೆ ತೆರಳಿ ಅಲ್ಲಿ ಆಪಾದಿತ ಸರ್ಕಾರಿ ನೌಕರರನ್ನು ಭೇಟಿ ಮಾಡಿದಾಗ 10+2 ಒಟ್ಟು 12 ಸಾವಿರಗಳ ಲಂಚವನ್ನು ನೀಡಿದರೆ ಇಂದೇ ಮಧ್ಯಾಹ್ನದ ಒಳಗೆ ದೂರ4ಉದಾರರ ಕಡತ ರವಾನಿಸುವುದಾಗಿ ತಿಳಿಸಿರುತ್ತಾರೆ. ದೂರುದಾರರು ತಮ್ಮ ಬಳಿ ಅಷ್ಟೊಂದು ಹಣ ಇಲ್ಲ ಸ್ವಲ್ಪ ಕಡಿಮೆ ಮಾಡಿ ಎಂದು ಕೇಳಿದಾಗ ಆಪಾದಿತ ಸರ್ಕಾರಿ ನೌಕರ 10,000/- ಕೊಡಿ ಎಂದು ಲಂಚದ ಹಣಕ್ಕೆ ಒತ್ತಾಯಿಸಿರುತ್ತಾರೆ. ಈಗ ಪೂರ್ತಿ ಹಣ ಇಲ್ಲ ರೂ. 6,000/- ಗಳಿವೆ ಅದನ್ನು ತಂದು ಕೊಡುತ್ತೇನೆ, ಉಳಿದ ಹಣವನ್ನು ಯಾರಿಂದಾದರೂ ಕಳುಹಿಸುತ್ತೇನೆ ಎಂದು ದೂರುದಾರರು ಆಪಾದಿತ ಸರ್ಕಾರಿ ನೌಕರರನ್ನು ಕೇಳಿದಾಗ ಆಯ್ತು ಎಂದಿರುತ್ತಾರೆ. ಈ ಸಂಭಾಷಣೆಯನ್ನು ದೂರುದಾರರು ತಮ್ಮ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿರುತ್ತಾರೆ.

5) ದೂರುದಾರರಿಗೆ ಲಂಚದ ಹಣ ಕೊಟ್ಟು ಕೆಲಸ ಮಾಡಿಸಿಕೊಳ್ಳಲು ಇಷ್ಟವಿಲ್ಲದ ಕಾರಣ ಅದೇ ದಿನ ಅಂದರೆ ದಿನಾಂಕ 17.04.2015 ರಂದು ಕಲಬುರಗಿ ಲೋಕಾಯುಕ್ತ ಪೊಲೀಸ್ ಠಾಣೆಗೆ ಹಾಜರಾಗಿ, ತನಿಖಾಧಿಕಾರಿಯ ಮುಂದೆ ದೂರನ್ನು ಸಲ್ಲಿಸಿದ್ದು, ಅದರಂತೆ, ಸದರಿ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ 08/2015 ರಂತೆ ಪಿ.ಸಿ. ಕಾಯ್ದೆ ಕಲಂ 7, 13(1)(ಡಿ) ಮತ್ತು 13(2) ರಂತೆ ಆಪಾದಿತ ಸರ್ಕಾರಿ ನೌಕರ ವಿರುದ್ಧ ಪ್ರಥಮ ವರ್ತಮಾನ ವರದಿ ದಾಖಲಾಗಿರುತ್ತದೆ.

6) ದಿನಾಂಕ 17.04.2015 ರಂದು ದೂರುದಾರರು ಆಪಾದಿತ ಸರ್ಕಾರಿ ನೌಕರ ಕೆಲಸ ಮಾಡುವ ಕಲಬುರಗಿ ನಗರದ ಮಿನಿ ವಿಧಾನಸೌಧದ ಪಕ್ಕದಲ್ಲಿರುವ ನಗರ ಮತ್ತು ಗ್ರಾಮಾಂತರ ಯೋಜನಾ ಕಛೇರಿಯಲ್ಲಿರುವ ಛೇಂಬರಿನಲ್ಲಿ ಆಪಾದಿತ ಸರ್ಕಾರಿ ನೌಕರ ರೂ. 6,000/- ಗಳ ಲಂಚದ ಹಣವನ್ನು ದೂರುದಾರರಿಂದ ನೆರಳು ಸಾಕ್ಷಿದಾರರಾದ ಶ್ರೀ ವಿಜಯಕುಮಾರ್ ಇವರ ಸಮಕ್ಷಮ ಪಡೆದುಕೊಂಡಿರುತ್ತಾರೆ.

7) ಆಪಾದಿತ ಸರ್ಕಾರಿ ನೌಕರ ರವರಿಗೆ ವೀಕ್ಷಣಾ ಟಿಪ್ಪಣಿಯನ್ನು ಕಳುಹಿಸಿ, ಅವರ ದುರ್ನಡತೆಯ ಬಗ್ಗೆ ಇಲಾಖಾ ವಿಚಾರಣೆಕೈಗೊಳ್ಳುವ ಸಂಬಂಧ, ಶಿಸ್ತು ಪ್ರಾಧಿಕಾರಕ್ಕೆ ಏಕೆ

ಶಿಫಾರಸ್ಸು ವರದಿ ಕಳುಹಿಸಬಾರದು ಎಂಬುದರ ಬಗ್ಗೆ ವಿವಿರಣೆಯನ್ನು/ಕಾರಣವನ್ನು ಕೇಳಲಾಗಿ, ಆಪಾದಿತ ಸರ್ಕಾರಿ ನೌಕರ ವೀಕ್ಷಣಾ ಟಿಪ್ಪಣಿಯ ಮೇಲೆ ಉತ್ತರವನ್ನು ಸಲ್ಲಿಸಿದ್ದು, ಆಪಾದನೆಗಳನ್ನು ಅಲ್ಲಗಳೆದಿರುತ್ತಾರೆ. ತನಿಖಾಧಿಕಾರಿಗಳ ವರದಿ ಮತ್ತು ಅದರೊಂದಿಗಿನ ಸಾಕ್ಷ್ಯಗಳ ಹಿನ್ನಲೆಯಲ್ಲಿ ಆಪಾದಿತ ಸರ್ಕಾರಿ ನೌಕರರ ಸಮಜಾಯಿಷಿಯನ್ನು ಒಪ್ಪಲು ಸಾಧ್ಯವಿರದ ಕಾರಣ , ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮ, 1966 ಕಲಂ 3(1)(i) ಮತ್ತು (iii) ರಡಿಯಲ್ಲಿ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬಂದ ಕಾರಣ, ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(3) ಅಡಿಯಲ್ಲಿ, ಉಲ್ಲೇಖ(1)ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದು, ಸದರಿ ವರದಿ ಅನ್ವಯ ಕರ್ನಾಟಕ ಸರ್ಕಾರವು ಆದೇಶ ದಿನಾಂಕ 31/10/2017 ರಂದು ಮಾನ್ಯ ಉಪಲೋಕಾಯುಕ್ತ–1 ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ, ನಾಮ ನಿರ್ದೇಶನವನ್ನು ನೀಡಿದ್ದು, ಅದರಂತೆ ಮಾನ್ಯ ಉಪಲೋಕಾಯುಕ್ತ–1 ರವರು ದಿನಾಂಕ 04/11/2017 ರಂದು ಅಪರ ನಿಬಂಧಕರು, ವಿಚಾರಣೆಗಳ–10 ರವರಿಗೆ ವಿಚಾರಣೆ ಮಾಡಿ ವರದಿಯನ್ನು ಸಲ್ಲಿಸುವಂತೆ ನಾಮನಿರ್ದೇಶನ ಮಾಡಿರುತ್ತಾರೆ.

8) ನಾಮ ನಿರ್ದೇಶನದ ಆದೇಶದಂತೆ, ಆ.ಸ.ನೌ ರವರ ವಿರುದ್ಧ ದೋಷಾರೋಪಣೆ (Article of charges) ಅನ್ನು ಅಪರ ನಿಬಂಧಕರು, ವಿಚಾರಣೆಗಳು–10 ರವರು ರಚಿಸಿದ್ದು, ಸದರಿ ದೋಷಾರೋಪಣೆ ಅನುಬಂಧ–1 ಮತ್ತು ಅನುಬಂಧ–2 ರೊಂದಿಗೆ ದುರ್ನಡತೆ ಮತ್ತು ಕರ್ತವ್ಯ ಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು **ಆಪಾದಿತ ಸರ್ಕಾರಿ ನೌಕರ ರವರಿಗೆ** ದಿನಾಂಕ 07/12/2017 ರಂದು ಈ ಕೆಳಕಂಡಂತೆ ಕಳುಹಿಸಲಾಗಿರುತ್ತದೆ.

***ಅನುಬಂಧ–1***
***ದೋಷಾರೋಪಣೆ–1***

ಆಪಾದಿತ ಸರ್ಕಾರಿ ನೌಕರರಾದ **ಶ್ರೀ. ಸುನೀಲ್ ಎಸ್. ಚಕ್ರ**, ಸಹಾಯಕ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ, ಕಲಬುರಗಿ, ಕಲಬುರಗಿ ಜಿಲ್ಲೆ, ಹಾಲಿ ಸದಸ್ಯ ಕಾರ್ಯದರ್ಶಿ,

ಶಹಪೂರ ನಗರ ಯೋಜನಾ ಪ್ರಾಧಿಕಾರ, ಯಾದಗಿರಿ ಜಿಲ್ಲೆ ಆದ ನೀವು ಈ ಕೆಳಕಂಡಂತೆ ಕರ್ತವ್ಯಲೋಪವೆಸಗಿರುತ್ತೀರಿ ;

i. ದೂರುದಾರರ ತಾಯಿಯವರಾದ ಶ್ರೀಮತಿ. ಮಾಣಿಕಬಾಯಿರವರ ಹೆಸರಿನಲ್ಲಿ ಸೇಡಂ ತಾಲ್ಲೂಕಿನ ಮುಧೋಳ ಗ್ರಾಮದ ಸರ್ವೆ ನಂ. 348/5,6,7ರಲ್ಲಿ ಒಟ್ಟು 23 ಗುಂಟೆ ಜಮೀನನ್ನು ಕೃಷಿಯೇತರವನ್ನಾಗಿ ಪರಿವರ್ತಿಸಲು ಅರ್ಜಿ ಸಲ್ಲಿಸಲಾಗಿದ್ದು, ಅದಕ್ಕನುಗುಣವಾಗಿ ಮಾನ್ಯ ಜಿಲ್ಲಾಧಿಕಾರಿಗಳು, ಕಲಬುರಗಿರವರು ಪತ್ರ ಸಂ:ಕಂ/ಭೂ/ಕೃಯೇ/ಗ್ರಾಮೀಣ/123/2014-15 ದಿನಾಂಕ: 23.02.2015ರನ್ವಯ ಆರು ಕಾರ್ಯಾಲಯಗಳಿಗೆ ಎನ್.ಓ.ಸಿ 15 ದಿನಗಳ ಒಳಗಡೆ ನೀಡಲು ನಿರ್ದೇಶಿಸಿದ್ದರೂ, ಸುಮಾರು 2 ತಿಂಗಳು ಕಳೆದರೂ ನಗರ ಮತ್ತು ಗ್ರಾಮಾಂತರ ಯೋಜನೆ, ಕಲಬುರಗಿರವರು ಎನ್.ಓ.ಸಿ ಸಲ್ಲಿಸಿರುವುದಿಲ್ಲ. ಆದ್ದರಿಂದ, ದೂರುದಾರರು 7-8 ಬಾರಿ ಸದರಿ ಕಾರ್ಯಾಲಯಕ್ಕೆ ಭೇಟಿ ನೀಡಿ ವಿನಂತಿಸಿ ಕೊಂಡರೂ ಪ್ರಯೋಜನವಾಗಿಲ್ಲ.

ii. ದಿನಾಂಕ: 17.04.2015ರಂದು ದೂರುದಾರರು ನಗರ ಮತ್ತು ಗ್ರಾಮಾಂತರ ಯೋಜನೆ ಕಲಬುರಗಿ ಕಾರ್ಯಾಲಯಕ್ಕೆ ತೆರಳಿ, ಅಲ್ಲಿ ಆಪಾದಿತ ಸರ್ಕಾರಿ ನೌಕರರಾದ ನಿಮ್ಮನ್ನು ಭೇಟಿ ಮಾಡಿದಾಗ, 10+2 ಒಟ್ಟು 12 ಸಾವಿರಗಳ ಲಂಚವನ್ನು ನೀಡಿದರೆ ಇಂದೇ ಮಧ್ಯಾಹ್ನದ ಒಳಗೆ ದೂರುದಾರರ ಕಡತ ರವಾನಿಸುವುದಾಗಿ ತಿಳಿಸಿರುತ್ತೀರಿ. ದೂರುದಾರರು ತಮ್ಮ ಬಳಿ ಅಷ್ಟೊಂದು ಹಣ ಇಲ್ಲ ಸ್ವಲ್ಪ ಕಡಿಮೆ ಮಾಡಿ ಎಂದು ಕೇಳಿದಾಗ ಆಪಾದಿತ ಸರ್ಕಾರಿ ನೌಕರರಾದ ನೀವು ರೂ.10,000/- ಕೊಡಿ ಎಂದು ಲಂಚದ ಹಣಕ್ಕೆ ಒತ್ತಾಯಿಸಿರುತ್ತೀರಿ. ದೂರುದಾರ ಬಳಿ ಪೂರ್ತಿ ಹಣ ಇಲ್ಲದ ಕಾರಣ ರೂ.6,000/- ತಂದು ಕೊಡುತ್ತೇನೆ, ಉಳಿದ ಹಣವನ್ನು ಯಾರಿಂದಾದರೂ ಕಳುಹಿಸುತ್ತೇನೆ ಎಂದು ದೂರುದಾರರು ನಿಮ್ಮನ್ನು ಕೇಳಿದಾಗ ಆಪಾದಿತ ಸರ್ಕಾರಿ ನೌಕರರಾದ ನೀವು ಒಪ್ಪಿಕೊಂಡಿರುತ್ತೀರಿ.

iii. ದಿನಾಂಕ: 17.04.2015ರಂದು ದೂರುದಾರರು ನೀವು ಕೆಲಸ ಮಾಡುವ ಕಲಬುರಗಿ ನಗರದ ಮಿನಿವಿಧಾನ ಸೌಧದ ಪಕ್ಕದಲ್ಲಿರುವ ನಗರ ಮತ್ತು ಗ್ರಾಮಾಂತರ ಯೋಜನಾ ಕಛೇರಿಯಲ್ಲಿರುವ ಛೇಂಬರಿನಲ್ಲಿ ಆಪಾದಿತ ಸರ್ಕಾರಿ ನೌಕರರಾದ ನೀವು ರೂ.6,000/-ಗಳ ಲಂಚದ ಹಣವನ್ನು ದೂರುದಾರರಿಂದ ನೆರಳು ಸಾಕ್ಷಿದಾರರಾದ ಶ್ರೀ. ವಿಜಯ ಕುಮಾರ ಇವರ ಸಮಕ್ಷಮ ಪಡೆದುಕೊಂಡಿರುತ್ತೀರಿ ಹಾಗೂ ತನಿಖಾಧಿಕಾರಿಯವರು ಸದರಿ ಲಂಚದ ಹಣವನ್ನು ವಶಪಡಿಸಿಕೊಂಡಿರುತ್ತಾರೆ. ಸದರಿ ಹಣದ ಬಗ್ಗೆ ತನಿಖಾಧಿಕಾರಿಯು ನಿಮ್ಮನ್ನು ವಿಚಾರಿಸಿದಾಗ ಸರಿಯಾದ, ತೃಪ್ತಿದಾಯಕವಾದ ಉತ್ತರ ಅಥವಾ ವಿವರಣೆ ಅಥವಾ ಲೆಕ್ಕ ನೀಡಿರುವುದಿಲ್ಲ.

ಆದಕಾರಣ ಆಪಾದಿತ ಸರ್ಕಾರಿ ನೌಕರರಾದ ನೀವು ಸರ್ಕಾರಿ ಸೇವಕರಾಗಿದ್ದು, ನಿಮ್ಮ ಕರ್ತವ್ಯಪಾಲನೆಯಲ್ಲಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ ಸ್ವಂತ ಲಾಭಕ್ಕಾಗಿ ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದು, ಆಪಾದಿತ ಸರ್ಕಾರಿ ನೌಕರರಾದ ನೀವು ಕರ್ನಾಟಕ ಸರ್ಕಾರಿ ಸೇವಾ (ನಡತೆ) ನಿಯಮಾವಳಿ 1966ರ ನಿಯಮ (3)(1)ನೇ ನಿಬಂಧನೆಯನ್ನು ಉಲ್ಲಂಘಿಸಿ ದುರ್ನಡತೆ ಎಸಗಿದ್ದೀರಿ.

## *ಅನುಬಂಧ-2*
## ದೋಷಾರೋಪಣೆಯ ವಿವರ
(ಸ್ಟೇಟ್‌ಮೆಂಟ್ ಆಫ್ ಇಂಪ್ಯೂಟೇಷನ್ ಆಫ್ ಮಿಸ್‌ಕಾಂಡೆಕ್ಟ್)

3. ಮಾನ್ಯ ಅಪರ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಕಲಬುರಗಿ ಜಿಲ್ಲೆಯ ಲೋಕಾಯುಕ್ತ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕರು (ಇನ್ನು ಮುಂದೆ 'ತನಿಖಾಧಿಕಾರಿ' ಎಂದು ಕರೆಯಲ್ಪಡುತ್ತಾರೆ) ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ಸಲ್ಲಿಸಿದ ವರದಿಯಲ್ಲಿ ಶ್ರೀ. ಸುನೀಲ್ ಎಸ್. ಚಕ್ರ, ಸಹಾಯಕ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನೆ ಕಛೇರಿ, ಕಲಬುರಗಿ, ಕಲಬುರಗಿ ಜಿಲ್ಲೆ ಇವರು ದೂರುದಾರರಾದ ಶ್ರೀ. ಸುಧಾಕರ ತಂದೆ ಭಾರತರಾವ್ ಮಹೇಂದ್ರಕರ, ಮಹೇಂದ್ರಕರ ನಿವಾಸ,

ಕರ್ನಾಟಕ ಶಾಲೆ ಹತ್ತಿರ, ರಾಜೇಶ್ವರ, ಬಸವಕಲ್ಯಾಣ ತಾಲ್ಲೂಕು, ಬೀದರ್ ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರು ಆಪಾದಿತ ಸರ್ಕಾರಿ ನೌಕರರನ್ನು ಭೇಟಿ ಮಾಡಿದಾಗ ದುರ್ನಡತೆ ತೋರಿಸಿರುತ್ತಾರೆ ಎಂದು ವರದಿ ಸಲ್ಲಿಸಿದ ಮೇರೆಗೆ, ದಾಖಲೆಗಳನ್ನು ಪರಿಶೀಲಿಸಿದಾಗ, ಆಪಾದಿತ ಸರ್ಕಾರಿ ನೌಕರರು ದುರ್ನಡತೆ ತೋರಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 7 ರನ್ವಯ ಗೌರವಾನ್ವಿತ ಉಪಲೋಕಾಯುಕ್ತರವರು ತನಿಖೆ ಕೈಗೊಂಡಿರುತ್ತಾರೆ.

4) ಆಪಾದಿತ ಸರ್ಕಾರಿ ನೌಕರರ ಮೇಲಿನ ಆಪಾದನೆಯ ಸಂಕ್ಷಿಪ್ತ ಸಾರಾಂಶ :-

i. ದೂರುದಾರರ ತಾಯಿಯವರಾದ ಶ್ರೀಮತಿ. ಮಾಣಿಕಬಾಯಿರವರ ಹೆಸರಿನಲ್ಲಿ ಸೇಡಂ ತಾಲ್ಲೂಕಿನ ಮುಧೋಳ ಗ್ರಾಮದ ಸರ್ವೆ ನಂ.348/5,6,7ರಲ್ಲಿ ಒಟ್ಟು 23 ಗುಂಟೆ ಜಮೀನನ್ನು ಕೃಷಿಯೇತರವನ್ನಾಗಿ ಪರಿವರ್ತಿಸಲು ಅರ್ಜಿ ಸಲ್ಲಿಸಲಾಗಿದ್ದು, ಅದಕ್ಕನುಗುಣವಾಗಿ ಮಾನ್ಯ ಜಿಲ್ಲಾಧಿಕಾರಿಗಳು, ಕಲಬುರಗಿರವರು ಪತ್ರ ಸಂ:ಕಂ/ಭೂ/ಕೃಯೇ/ಗ್ರಾಮೀಣ/123/2014-15 ದಿನಾಂಕ: 23.02.2015ರನ್ವಯ ಆರು ಕಾರ್ಯಾಲಯಗಳಿಗೆ ಎನ್.ಓ.ಸಿ 15 ದಿನಗಳ ಒಳಗಡೆ ನೀಡಲು ನಿರ್ದೇಶಿಸಿದ್ದರು. ಸುಮಾರು 2 ತಿಂಗಳು ಕಳೆದರೂ ನಗರ ಮತ್ತು ಗ್ರಾಮಾಂತರ ಯೋಜನೆ, ಕಲಬುರಗಿರವರು ಎನ್.ಓ.ಸಿ ಸಲ್ಲಿಸಿರುವುದಿಲ್ಲ. ಆದ್ದರಿಂದ, ದೂರುದಾರರು 7-8 ಬಾರಿ ಸದರಿ ಕಾರ್ಯಾಲಯಕ್ಕೆ ಭೇಟಿ ನೀಡಿ ವಿನಂತಿಸಿ ಕೊಂಡರೂ ಪ್ರಯೋಜನವಾಗಿಲ್ಲ.

ii. ದಿನಾಂಕ: 17.04.2015ರಂದು ದೂರುದಾರರು ನಗರ ಮತ್ತು ಗ್ರಾಮಾಂತರ ಯೋಜನೆ ಕಲಬುರಗಿ ಕಾರ್ಯಾಲಯಕ್ಕೆ ತೆರಳಿ, ಅಲ್ಲಿ ಆಪಾದಿತ ಸರ್ಕಾರಿ ನೌಕರರನ್ನು ಭೇಟಿ ಮಾಡಿದಾಗ 10+2 ಒಟ್ಟು 12 ಸಾವಿರಗಳ ಲಂಚವನ್ನು ನೀಡಿದರೆ ಇಂದೇ ಮಧ್ಯಾಹ್ನದ ಒಳಗೆ ದೂರುದಾರರ ಕಡತ ರವಾನಿಸುವುದಾಗಿ ತಿಳಿಸಿರುತ್ತಾರೆ. ದೂರುದಾರರು ತಮ್ಮ ಬಳಿ ಅಷ್ಟೊಂದು ಹಣ ಇಲ್ಲ ಸ್ವಲ್ಪ ಕಡಿಮೆ ಮಾಡಿ ಎಂದು ಕೇಳಿದಾಗ ಆಪಾದಿತ ಸರ್ಕಾರಿ ನೌಕರರು ರೂ.10,000/- ಕೊಡಿ ಎಂದು ಲಂಚದ ಹಣಕ್ಕೆ ಒತ್ತಾಯಿಸಿರುತ್ತಾರೆ. ಈಗ ಪೂರ್ತಿ ಹಣ ಇಲ್ಲ ರೂ.6,000/-ಗಳಿವೆ ಅದನ್ನು ತಂದು ಕೊಡುತ್ತೇನೆ, ಉಳಿದ ಹಣವನ್ನು ಯಾರಿಂದಾದರೂ ಕಳುಹಿಸುತ್ತೇನೆ ಎಂದು ದೂರುದಾರರು ಆಪಾದಿತ ಸರ್ಕಾರಿ

ನೌಕರರನ್ನು ಕೇಳಿದಾಗ ಆಯ್ತು ಎಂದಿರುತ್ತಾರೆ. ಈ ಸಂಭಾಷಣೆಯನ್ನು ದೂರುದಾರರು ತಮ್ಮ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿರುತ್ತಾರೆ.

iii. ದೂರುದಾರರಿಗೆ ಲಂಚದ ಹಣ ಕೊಡಲು ಇಷ್ಟವಿಲ್ಲದೇ ಇದ್ದುದರಿಂದ, ಅದೇ ದಿನ ಅಂದರೆ ದಿನಾಂಕ:17.04.2015ರ ಕಲಬುರಗಿ ಲೋಕಾಯುಕ್ತ ಪೋಲೀಸ್ ಠಾಣೆಗೆ ಹಾಜರಾಗಿ, ತನಿಖಾಧಿಕಾರಿಯ ಮುಂದೆ ದೂರನ್ನು ಸಲ್ಲಿಸಿರುತ್ತಾರೆ. ಅದರಂತೆ, ಸದರಿ ಪೊಲೀಸ್ ಠಾಣೆಯಲ್ಲಿ ಮೊ.ಸಂ.8/2015 ರಂತೆ ಪಿ.ಸಿ.ಕಾಯಿದೆ ಕಲಂ 7, 13(1)(ಡಿ) ಮತ್ತು 13(2) ರಂತೆ ಆಪಾದಿತ ಸರ್ಕಾರಿ ನೌಕರರ ವಿರುದ್ಧ ಪ್ರ.ವ. ವರದಿ ದಾಖಲಾಗಿರುತ್ತದೆ.

iv. ದಿನಾಂಕ: 17.04.2015ರಂದು ದೂರುದಾರರು ಆಪಾದಿತ ಸರ್ಕಾರಿ ನೌಕರರು ಕೆಲಸ ಮಾಡುವ ಕಲಬುರಗಿ ನಗರದ ಮಿನಿವಿಧಾನ ಸೌಧದ ಪಕ್ಕದಲ್ಲಿರುವ ನಗರ ಮತ್ತು ಗ್ರಾಮಾಂತರ ಯೋಜನಾ ಕಛೇರಿಯಲ್ಲಿರುವ ಛೇಂಬರಿನಲ್ಲಿ ಆಪಾದಿತ ಸರ್ಕಾರಿ ನೌಕರರು ರೂ.6,000/–ಗಳ ಲಂಚದ ಹಣವನ್ನು ದೂರುದಾರರಿಂದ ನೆರಳು ಸಾಕ್ಷಿದಾರರಾದ ಶ್ರೀ. ವಿಜಯ ಕುಮಾರ ಇವರ ಸಮಕ್ಷಮ ಪಡೆದುಕೊಂಡಿರುತ್ತಾರೆ.

v. ಅದೇ ದಿವಸ ಸದರಿ ಲಂಚದ ಹಣ ರೂ.6,000/ಗಳನ್ನು ಆಪಾದಿತ ಸರ್ಕಾರಿ ನೌಕರರಿಂದ ಪಂಚನಾಮೆ ಮೂಲಕ ತನಿಖಾಧಿಕಾರಿಯವರು ವಶಪಡಿಸಿಕೊಂಡಿರುತ್ತಾರೆ.

vi. ಆಪಾದಿತ ಸರ್ಕಾರಿ ನೌಕರರನ್ನು ಅದೇ ಕಾರಣಕ್ಕಾಗಿ ದಸ್ತಗಿರಿ ಮಾಡಿರುತ್ತಾರೆ.

vii. ಸದರಿ ಹಣದ ಬಗ್ಗೆ ತನಿಖಾಧಿಕಾರಿಯು ಆಪಾದಿತ ಸರ್ಕಾರಿ ನೌಕರರನ್ನು ವಿಚಾರಿಸಿದಾಗ ಸರಿಯಾದ, ತೃಪ್ತಿದಾಯಕವಾದ ಉತ್ತರ ಅಥವಾ ವಿವರಣೆ ಅಥವಾ ಲೆಕ್ಕ ನೀಡಿರುವುದಿಲ್ಲ.

viii. ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ ಹಾಗೂ ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ ಮತ್ತು ಇತರ ಅಂಶಗಳು, ಆಪಾದಿತ ಸರ್ಕಾರಿ ನೌಕರರ ಸತತವಾದ ದುರ್ನಡತೆಯನ್ನು ತೋರಿಸುತ್ತದೆ.

(5) ನಂತರ, ಆಪಾದಿತ ಸರ್ಕಾರಿ ನೌಕರರಿಗೆ ವೀಕ್ಷಣಾ ಟಿಪ್ಪಣಿಯನ್ನು ಕಳುಹಿಸಿ, ಅವರ ದುರ್ನಡತೆಯ ಬಗ್ಗೆ ಇಲಾಖಾ ವಿಚಾರಣೆ ಕೈಗೊಳ್ಳುವ ಸಂಬಂಧ, ಶಿಸ್ತು ಪ್ರಾಧಿಕಾರಕ್ಕೆ ಏಕೆ

ಶಿಫಾರಸ್ಸು ವರದಿ ಕಳುಹಿಸಬಾರದು ಎಂಬುದರ ಬಗ್ಗೆ ವಿವರಣೆಯನ್ನು/ಕಾರಣವನ್ನು ಆಪಾದಿತ ಸರ್ಕಾರಿ ನೌಕರರಿಂದ ಕೇಳಲಾಯಿತು. ಆಪಾದಿತ ಸರ್ಕಾರಿ ನೌಕರರು ವೀಕ್ಷಣಾ ಟಿಪ್ಪಣಿಯ ಮೇಲೆ ಉತ್ತರವನ್ನು ಸಲ್ಲಿಸಿದ್ದು, ಆಪಾದನೆಗಳನ್ನು ಅಲ್ಲಗಳೆದಿರುತ್ತಾರೆ. ತನಿಖಾಧಿಕಾರಿಗಳ ವರದಿ ಮತ್ತು ಅದರೊಂದಿಗಿನ ಸಾಕ್ಷ್ಯಗಳ ಹಿನ್ನಲೆಯಲ್ಲಿ ಆಪಾದಿತ ಸರ್ಕಾರಿ ನೌಕರರ ಸಮಜಾಯಿಷಿಯನ್ನು ಈ ಹಂತದಲ್ಲಿ ಒಪ್ಪಲು ಸಾಧ್ಯವಿರುವುದಿಲ್ಲ.

(6) ಆದ್ದರಿಂದ, ಆಪಾದಿತ ಸರ್ಕಾರಿ ನೌಕರರು ಸಾರ್ವಜನಿಕ/ಸರ್ಕಾರಿ ನೌಕರರಾಗಿದ್ದು, ಅವರ ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೇ, ಕರ್ತವ್ಯಲೋಪವೆಸಗಿ, ದುರ್ವರ್ತನೆ ತೋರಿಸಿ, ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ, 1966 ರ ನಿಯಮಗಳು 3(1)(i) ಮತ್ತು (iii) ರನ್ವಯ ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುವುದು ಕಂಡುಬಂದಿರುತ್ತದೆ.

(7) ಅದಲ್ಲದೆ, ಆಪಾದಿತ ಸರ್ಕಾರಿ ನೌಕರರು ಸರ್ಕಾರಿ ನೌಕರರಾಗಿದ್ದು, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966 ರ ನಿಯಮ 3(1)ರನ್ವಯ ದುರ್ನಡತೆ/ದುರ್ವರ್ತನೆ ಕಂಡು ಬಂದಿದ್ದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿ ಹಾಗೂ ಆಪಾದಿತ ಸರ್ಕಾರಿ ನೌಕರರ ವಿರುದ್ಧ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14–ಎ ರ ಅಡಿ ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿ, ಆಪಾದಿತ ಸರ್ಕಾರಿ ನೌಕರರ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಲು ಶಿಸ್ತು ಪ್ರಾಧಿಕಾರಿಯಾದ ಸರ್ಕಾರ ಉಲ್ಲೇಖ (1)ರ ಆದೇಶದಲ್ಲಿ ಗೌರವಾನ್ವಿತ ಉಪಲೋಕಾಯುಕ್ತರವರಿಗೆ ವಹಿಸಿದ್ದು, ಗೌರವಾನ್ವಿತ ಉಪಲೋಕಾಯುಕ್ತರವರು **ಅಪರ ನಿಬಂಧಕರು ವಿಚಾರಣೆಗಳು 10** ಇವರನ್ನು ವಿಚಾರಣೆ ನಡೆಸಲು ನೇಮಕ ಮಾಡಿದ್ದಾರೆ. **ಆದ್ದರಿಂದ ನಿಮ್ಮ ವಿರುದ್ಧ ಈ ಮೇಲ್ಕಂಡ ಆಪಾದನೆ.**

9) ಈ ಮೇಲ್ಕಂಡ ದೋಷಾರೋಪಣೆ (ಆರ್ಟಿಕಲ್ ಆಫ್ ಚಾರ್ಜ್) ಆ.ಸ.ನೌ ರವರಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ ಆ.ಸ.ನೌ ರವರು ದಿನಾಂಕ 29/12/2017 ರಂದು

ಈ ಪ್ರಾಧಿಕಾರದ ಮುಂದೆ ಹಾಜರಾಗಿದ್ದು, ಅವರ ಪ್ರಥಮ ಮೌಖಿಕ ಹೇಳಿಕೆಯನ್ನು ನಿಯಮ–11 (9) ಕೆ.ಸಿ.ಎಸ್. ಸಿಸಿಎ ರೂಲ್ಸ್ 1957ರ ಅಡಿಯಲ್ಲಿ ದಾಖಲಿಸಿಕೊಳ್ಳಲಾಗಿರುತ್ತದೆ. ಆ.ಸ.ನೌ ರವರು ತಪ್ಪೊಪ್ಪಿಕೊಳ್ಳದೆ ಆರೋಪಗಳ ವಿಚಾರಣೆಯನ್ನು ಬಯಸಿರುತ್ತಾರೆ.

10) ಆ.ಸ.ನೌ ರವರಿಗೆ ದಾಖಲೆಗಳ ಪರಿಶೀಲನೆ ಮತ್ತು ಶೋಧನೆಗಾಗಿ ಅವಕಾಶ ಕಲ್ಪಿಸಲಾಗಿರುತ್ತದೆ.

11) ಆ.ಸ.ನೌ ರವರು ತಮ್ಮ ಲಿಖಿತ ರಕ್ಷಣಾ ಹೇಳಿಕೆಯನ್ನು ದಿನಾಂಕ 22/06/2018 ರಂದು ಸಲ್ಲಿಸಿ, ದೋಷಾರೋಪಣೆಯಲ್ಲಿ ಮಾಡಿರುವ ಆರೋಪಗಳನ್ನು ಸಂಪೂರ್ಣವಾಗಿ ಅಲ್ಲಗಳೆದಿರುತ್ತಾರೆ,

12) ಈ ವಿಚಾರಣೆಯಲ್ಲಿ, ಆ.ಸ.ನೌ ರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಮಂಡನಾಧಿಕಾರಿಗಳು ತಮ್ಮ ಪರವಾಗಿ **ದೂರುದಾರರಾದ ಶ್ರೀ ಸುಧಾಕರ್ ಬೇಗ್** ರವರನ್ನು ಪಿ.ಡಬ್ಲ್ಯೂ.1 ಎಂದು, ಶ್ರೀ ಭೀಮರೆಡ್ಡಿ, ಸಾಕ್ಷಿ ರವರನ್ನು ಪಿಡಬ್ಲ್ಯೂ–2 ಎಂದು ಸಾಕ್ಷ್ಯ ನುಡಿಸಿಕೊಂಡು **ನಿ.ಪಿ.–1 ರಿಂದ 3** ರವರೆಗಿನ ದಾಖಲೆಗಳನ್ನು ಶಿಸ್ತು ಪ್ರಾಧಿಕಾರದ ಪರವಾಗಿ ಗುರುತಿಸಿಕೊಂಡಿರುತ್ತಾರೆ.

13) ಆಪಾದಿತ ಸರ್ಕಾರಿ ನೌಕರ ಶ್ರೀ ಸುನಿಲ್ ರವರ ವಕೀಲರು/ರಕ್ಷಣಾ ಸಹಾಯಕರು ದಿನಾಂಕ 18/04/2022 ರಂದು ಕರ್ನಾಟಕ ಸರ್ಕಾರದ ನಡವಳಿ ದಿನಾಂಕ 15.02.2021 ನ್ನು ಸಲ್ಲಿಸಿ ಶ್ರೀ ಸುನೀಲ, ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರ ಕಛೇರಿ, ಕಲಬುರಗಿ ಇವರ ವಿರುದ್ಧದ ಕ್ರಿಮಿನಲ್ ಆರೋಪಕ್ಕಾಗಿ ಕ್ರಿಮಿನಲ್ ನ್ಯಾಯಾಲಯವು ಆರೋಪಿತರನ್ನು ತಪ್ಪಿತಸ್ಥರೆಂದು ಪರಿಗಣಿಸಿರುವುದರಿಂದ ದಿನಾಂಕ 13.10.2020 ರಿಂದ ಅನ್ವಯವಾಗುವಂತೆ ಕರ್ನಾಟಕ ನಾಗರೀಕ ಸಥೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು 1957 ರ ನಿಯಮ 8 (viii) ರನ್ವಯ ಸದರಿಯವನರನ್ನು ಸರ್ಕಾರಿ ಸೇವೆಯಿಂದ

ea 20/1/4

ವಜಾಗೊಳಿಸಿರುವುದರಿಂದ, ಹಾಲಿ ಸದರಿಯವರು ಸರ್ಕಾರಿ ನೌಕರರಾಗಿರುವುದಿಲ್ಲವಾದ್ದರಿಂದ ವಿಚಾರಣೆಯನ್ನು ಕೈಬಿಡಲು ಕೋರಿರುತ್ತಾರೆ.

14) ಅದರಂತೆ, ಗೌರವಾನ್ವಿತ ಉಪಲೋಕಾಯುಕ್ತರವರು ದಿನಾಂಕ 22/04/2022 ರಂದು ಆಪಾದಿತ ಸರ್ಕಾರಿ ನೌಕರರು ಹಾಲಿ ಸರ್ಕಾರಿ ನೌಕರರಲ್ಲವಾದ್ದರಿಂದ ಸರ್ಕಾರಕ್ಕೆ ವರದಿ ಸಲ್ಲಿಸಲು ಸೂಚಿಸಿರುತ್ತಾರೆ.

15) ಮೇಲ್ಕಂಡ ಸಂದರ್ಭಗಳಲ್ಲಿ, ಆಪಾದಿತ ಸರ್ಕಾರಿ ನೌಕರರ ವಿರುದ್ಧ ಈ ವಿಚಾರಣೆಯನ್ನು ಹಾಲಿ ಕೈಬಿಡಲಾಗಿರುತ್ತದೆ ಹಾಗೂ ಈ ವಿಚಾರಣೆಯ ಕ್ರಿಮಿನಲ್ ಅಪೀಲನ್ನು ಮಾನ್ಯ ಉಚ್ಚ ನ್ಯಾಯಾಲಯ ಪುರಸ್ಕರಿಸಿದ್ದಲ್ಲಿ ಹಾಗೂ ಆಪಾದಿತ ಸರ್ಕಾರಿ ನೌಕರ ಶ್ರೀ ಸುನೀಲ್ ರವರು ಸೇವೆಗೆ ಮರುನೇಮಕಾತಿ (reinstated into service) ಸಕ್ಷಮ ಪ್ರಾಧಿಕಾರವು (Competent Authority) ರವರು ಲೋಕಾಯುಕ್ತ ಸಂಸ್ಥೆಗೆ ತಿಳಿಸಲು ಕೋರಿದೆ ಹಾಗೂ ಸದರಿ ಆಪಾದಿತ ಸರ್ಕಾರಿ ನೌಕರರ ವಿರುದ್ಧ ವಿಚಾರಣೆಯು ಎಲ್ಲಿಗೆ ಅಂತಿಮಗೊಂಡಿರುತ್ತದೆ ಮತ್ತೆ ಅಲ್ಲಿಂದ ಮುಂದುವರಿಸಿ ವಿಚಾರಣಾ ವರದಿ ಸಲ್ಲಿಸಲು ಕ್ರಮಕೈಗೊಳ್ಳಬಹುದಾಗಿರುತ್ತದೆಂದು ಗೌರವಾನ್ವಿತ ಉಪಲೋಕಾಯುಕ್ತರವರು ಅನುಮೋದಿಸಿರುತ್ತಾರೆ.

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ-1 ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

**29ನೇ ಏಪ್ರಿಲ್ 2022.**

(ಜಿ. ನಂಜುಂಡಯ್ಯ)
ಅಪರ ನಿಬಂಧಕರು ವಿಚಾರಣೆಗಳು-10,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

| LIST OF WITNESS EXAMINED ON BEHALF OF DISCIPLINARY AUTHORITY : |
|---|
| PW-1 : Sri. Sudhakara (Complainant) (original) |
| PW-2 Sri. Bhimareddy, Junior Health Assistant (Witness) |

**LIST OF EXHIBITS MARKED ON BEHALF OF DISCIPLINARY AUTHORITY:**

| | |
|---|---|
| Ex.P.1: | Entrustment Mahazar dated 17/04/2015 (Xerox) |
| Ex.P.2 : | 10 xerox copies of photos (Xerox) |
| Ex.P.3 : | Trap Mahazar dated 17/04/2015 (Xerox) |

**29th April 2022**

**( G. NANJUNDAIAH )**
Additional Registrar (Enquiries)-10
Karnataka Lokayukta,
Bengaluru.

KARNATAKA LOKAYUKTA

No.UPLOK-1/DE.1088/2017/ARE-10

Multi Storied Building,
Dr. B.R. Ambedkar Veedhi,
Bengaluru-560 001.
Dated 30.04.2022.

RECOMMENDATION

Sub:- Departmental inquiry against Sri Sunil, Assistant Director of Town and Country Planning, Kalaburagi - reg.

Ref:- 1) Government Order No. UDD 163 TPS 2015 dt.31.10.2017.

2) Nomination order No. UPLOK-1/DE.1088/2017 dated 04.11.2017 of Upalokayukta, State of Karnataka.

3) Inquiry report dated 29.04.2022 of Additional Registrar of Enquiries-10, Karnataka Lokayukta, Bengaluru.

~~~~~

The Government by its order dated 31.10.2017 initiated the disciplinary proceedings against Sri Sunil, Assistant Director of Town and Country Planning, Kalaburagi, [hereinafter referred to as Delinquent Government Official, for short as 'DGO' ] and entrusted the departmental inquiry to this Institution.
~~~~~

2. This Institution by Nomination Order No. UPLOK-1/DE.1088/2017 dated 04.11.2017 nominated Additional Registrar of Enquiries-10, Karnataka Lokayukta, Bengaluru, as the Inquiry Officer to frame charges and to conduct departmental inquiry against DGO for the alleged charge of misconduct, said to have been committed by him.

3. The DGO was tried for the charge of demanding and accepting bribe of Rs.6,000/- from the complainant for issuing NOC in respect of the land bearing Sy.No.348/5,6,7 measuring 23 guntas standing in the name of complainant's mother for conversion into non-agriculture purpose and thereby committed misconduct.

4. The Inquiry Officer (Additional Registrar of Enquiries-10) has reported that, the DGO Sri Sunil, Assistant Director of Town and Country Planning, Kalaburagi, is dismissed vide order dated 15.02.2021 of the Disciplinary Authority and hence the present enquiry proceedings cannot be continued against him.

5. On re-consideration of the report of Inquiry Officer and taking note of dismissal of DGO from service, I do not find any reason to interfere with the conclusions recorded by the Inquiry Officer.

6. Hence, it is hereby recommended to the Government to accept the report of Inquiry Officer and to stop the departmental inquiry against DGO Sri Sunil, Assistant Director of Town and Country Planning, Kalaburagi, for the present. The Competent Authority shall intimate this Institution, if the dismissal of DGO is set aside by the Competent Court in any appeal filed or to be filed by DGO and consequently if he is reinstated into service, so as to proceed with the enquiry against him from the stage where it was stopped.

7. Action taken in the matter shall be intimated to this Authority.

Connected records are enclosed herewith.

30/4/22

**(JUSTICE B.S.PATIL)**
Upalokayukta,
State of Karnataka.